ದಿನಾಂಕಃ 03.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

2. ಆ ದಿನ ಹೊನ್ನಾಳಿ ಪೊಲೀಸರು ಬಂಗಾರದ ಬೆಂಡೋಲೆ ಮತ್ತು ಜುಮುಕಿಯನ್ನು ನೀಡಿದರು. ನಾನು ಅದನ್ನು ತೂಕ ಮಾಡಿ ನೋಡಲಾಗಿ ಅದರ ತೂಕ 5 ಗ್ರಾಂ ಇತ್ತು. ಅದರ ಅಂದಿನ

ಬೆಲೆ ಸುಮಾರು 14,000/- ಇತ್ತು. ಸದರಿ ತೂಕ ಮತ್ತು ಬೆಲೆಯನ್ನು ನಾನು ತಿಳಿಸಿದ ಬಗ್ಗೆ ಮತ್ತು ನಾನು ಅವುಗಳನ್ನು ಪರೀಕ್ಷಿಸಿದ ಬಗ್ಗೆ ಪೊಲೀಸರು ಸದರಿ ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ. ಸದರಿ ದಾಖಲೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿ.21 ಎಂದು ಗುರುತಿಸಲ್ಪಟ್ಟಿರುವ ಪಂಚನಾಮೆಯ ದೃಢೀಕೃತ ಪ್ರತಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.21(ಡಿ) ಎಂದು ಗುರುತಿಸಲಾಯಿತು. ಸದರಿ ಬಂಗಾರವನ್ನು ಕಳ್ಳತನ ಮಾಡಿಕೊಂಡು ಬಂದಿರುವುದಾಗಿ ಪೊಲೀಸರು ತಿಳಿಸಿದ್ದರು. ನಾನು ಸದರಿ ದಾಖಲೆಗೆ ಸಹಿ ಮಾಡುವಾಗ ಸುಮಾರು 4-5 ಜನ ಇದ್ದರು. ಆದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ.

3. ಸದರಿ ಬಂಗಾರವನ್ನು ಪೊಲೀಸರಿಗೆ ಯಾರು ಕೊಟ್ಟಿದ್ದರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿರುವ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಅದನ್ನು ಪೊಲೀಸರು ನನಗೆ ಓದಿ ಹೇಳಿಲ್ಲ. ಕಳ್ಳತನದ ಪ್ರಕರಣದಲ್ಲಿ ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

4. ದಿನಾಂಕ 07.11.2015 ರಂದು ಸಂಜೆ 4.30 ಗಂಟೆಗೆ ನಾನು ನನ್ನ ಅಂಗಡಿಯಲ್ಲಿದ್ದ ಸಮಯದಲ್ಲಿ ಹೊನ್ನಾಳಿ ಪೊಲೀಸರು ಅಲ್ಲಿಗೆ ಬಂದು ಚಿನ್ನವನ್ನು ತೂಕ ಮಾಡುವ ಸಾಧನವನ್ನು ತೆಗೆದುಕೊಂಡು ಬರುವಂತೆ ತಿಳಿಸಿ ಸದರಿ ಸಾಧನದೊಂದಿಗೆ ಪೊಲೀಸರು ನನ್ನನ್ನು ಹೊನ್ನಾಳಿ ತಾಲ್ಲೂಕಿನ ಚಿಕ್ಕ ಬಾಸೂರು ಗ್ರಾಮದಲ್ಲಿರುವ 5 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಸದರಿ ಮನೆಗೆ ಫ್ರಾಸಾ.11 ಮತ್ತು ಫ್ರಾಸಾ.9 ರವರು ಪಂಚರಾಗಿ ಬಂದಿದ್ದರು ಎಂದರೆ ಸಾಕ್ಷಿ 5-7 ಜನ ಇದ್ದರು, ಅವರ ಹೆಸರು ಏನು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ವೃತ್ತ ನಿರೀಕ್ಷಕರು ಅವರ ವಶದಲ್ಲಿದ್ದ 5 ಜನ ಆರೋಪಿತರ ಪೈಕಿ ಇಬ್ಬರು ಆರೋಪಿತರನ್ನು ತೋರಿಸಿ ಅವರು ಏನು ತೋರಿಸುತ್ತಾರೋ ಅವುಗಳನ್ನು ವಶಪಡಿಸಿಕೊಳ್ಳಬೇಕು, ಪಂಚರಾಗಿ ಸಹಕರಿಸಿ ಎಂದು ನಿಮ್ಮನ್ನು ಕೋರಿಕೊಂಡರು ಎಂದರೆ ಸರಿ. ಅವರ ವಶದಲ್ಲಿದ್ದ 5 ಜನ ಆರೋಪಿತರ ಹೆಸರು ಮತ್ತು ವಿಳಾಸಗಳನ್ನು ನಿಮಗೆ ತನಿಖಾಧಿಕಾರಿಗಳು ನಿಮಗೆ ತಿಳಿಸಿದ್ದರು ಎಂದರೆ ಸಾಕ್ಷಿ ಹೇಳಿದ್ದರು ನನಗೆ ನೆನಪಿಗೆ ಬರುತ್ತಿಲ್ಲ ಎನ್ನುತ್ತಾರೆ. ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದ ಒಂದು ಮನೆಯಲ್ಲಿ ದರೋಡಿ ಮಾಡಿ ತನ್ನ ಪಾಲಿಗೆ ಬಂದದ್ದು ಎಂದು ಹೇಳಿ 5 ನೇ ಆರೋಪಿ ಶ್ರೀಧರ್ ತನ್ನ ಮನೆಯಲ್ಲಿದ್ದ ಒಂದು ಕಂಪ್ಯೂಟರ್ ಮಾನಿಟರ್, ಸಿ ಪಿ ಯು, ಸ್ಪೀಕರ್ ಮತ್ತು ತನ್ನ ಬೆಡ್ ರೂಮಿನಿಂದ ಒಂದು ಜೊತೆ

ಬಂಗಾರದ ಬೆಂಡೋಲೆ, ಜುಮುಕಿ ಮತ್ತು ಮನೆಯ ಹೊರಭಾಗದಲ್ಲಿದ್ದ ಒಂದು ಬೈಕನ್ನು ತಂದು ನಿಮ್ಮ ಮುಂದೆ ಹಾಜರುಪಡಿಸಿದನು ಎಂದರೆ ಸಾಕ್ಷಿ ಕೇವಲ ಬಂಗಾರವನ್ನು ಪೊಲೀಸರಿಗೆ ಒಬ್ಬ ವ್ಯಕ್ತಿ ಕೊಟ್ಟನು, ಉಳಿದ ವಸ್ತುಗಳ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಸ್ತುಗಳನ್ನು ಪೊಲೀಸರು ನಿಪಿ.21 ರಂತೆ ಸಂಜೆ 5.30 ಗಂಟೆಯಿಂದ 6.15 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡರು ಎಂದರೆ ಸರಿ. ಈ ಎಲ್ಲಾ ವಿಚಾರಗಳ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ.38 ಎಂದು ಗುರುತಿಸಲಾಯಿತು.

5. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.38 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳುಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಹೆಚ್ ಎ ಟಿ ವಕೀಲರಿಂದಃ ಆರೋಪಿ ಪರವಾಗಿಃ</u>

6. ನಿಮಗೆ ಹಿಂದಿ ಮತ್ತು ಮರಾಠಿ ಭಾಷೆಗಳನ್ನು ಹೊರತು ಪಡಿಸಿ ಬೇರೆ ಭಾಷೆಗಳು ಸರಿಯಾಗಿ ಬರುವುದಿಲ್ಲ ಎಂದರೆ ಸರಿ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿದ್ದೇನೆ ಹೊರತುಪಡಿಸಿ ನಿಮಗೆ ಬೇರೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಆ ದಿನ

ಪೊಲೀಸರಿಗೆ ಒಬ್ಬ ವ್ಯಕ್ತಿ ಬಂಗಾರದ ಓಲೆ ಮತ್ತು ಜುಮುಕಿಯನ್ನು ಕೊಟ್ಟನು, ನಂತರ ಪೊಲೀಸರು ಅದನ್ನು ನನಗೆ ಕೊಟ್ಟು ಪರೀಕ್ಷಿಸಲು ಹೇಳಿದರು. ನೀವು ನಿಪಿ.21 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೀರಿ ಎಂದರೆ ಸರಿ. ಪೊಲೀಸರಿಗೆ ನೀವು ಚಿನ್ನ, ಬೆಳ್ಳಿ ವ್ಯವಹಾರ ಮಾಡುವುದರಿಂದ ಪೊಲೀಸರಿಗೆ ಹೆದರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಈ ದಿನ ನೀವು ಮುಖ್ಯ ವಿಚಾರಣೆಯಲ್ಲಿ ಮತ್ತು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

7. ದಿನಾಂಕ 07.11.2015 ರಂದು ಸಂಜೆ 4.30 ಗಂಟೆಗೆ ನೀವು ನಿಮ್ಮ ಅಂಗಡಿಯಲ್ಲಿದ್ದ ಸಮಯದಲ್ಲಿ ಹೊನ್ನಾಳಿ ಪೊಲೀಸರು ಅಲ್ಲಿಗೆ ಬಂದು ಚಿನ್ನವನ್ನು ತೂಕ ಮಾಡುವ ಸಾಧನವನ್ನು ತೆಗೆದುಕೊಂಡು ಬರುವಂತೆ ತಿಳಿಸಿ ಸದರಿ ಸಾಧನದೊಂದಿಗೆ ಪೊಲೀಸರು ನಿಮ್ಮನ್ನು ಹೊನ್ನಾಳಿ ತಾಲ್ಲೂಕಿನ ಚಿಕ್ಕ ಬಾಸೂರು ಗ್ರಾಮದಲ್ಲಿರುವ 5 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ವೃತ್ತ ನಿರೀಕ್ಷಕರು ಅವರ ವಶದಲ್ಲಿದ್ದ 5 ಜನ ಆರೋಪಿತರ ಪೈಕಿ ಇಬ್ಬರು ಆರೋಪಿತರನ್ನು ತೋರಿಸಿ ಅವರು ಏನು ತೋರಿಸುತ್ತಾರೋ ಅವುಗಳನ್ನು ವಶಪಡಿಸಿಕೊಳ್ಳಬೇಕು, ಪಂಚರಾಗಿ ಸಹಕರಿಸಿ ಎಂದು ನಿಮ್ಮನ್ನು ಕೋರಿಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅವರ ವಶದಲ್ಲಿದ್ದ 5 ಜನ ಆರೋಪಿತರ ಹೆಸರು ಮತ್ತು ವಿಳಾಸಗಳನ್ನು ನಿಮಗೆ

ತನಿಖಾಧಿಕಾರಿಗಳು ನಿಮಗೆ ತಿಳಿಸಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದ ಒಂದು ಮನೆಯಲ್ಲಿ ದರೋಡಿ ಮಾಡಿ ತನ್ನ ಪಾಲಿಗೆ ಬಂದದ್ದು ಎಂದು ಹೇಳಿ ಒಬ್ಬ ವ್ಯಕ್ತಿ ತನ್ನ ಮನೆಯಲ್ಲಿದ್ದ ತನ್ನ ಬೆಡ್ ರೂಮಿನಿಂದ ಒಂದು ಜೊತೆ ಬಂಗಾರದ ಬೆಂಡೋಲೆ, ಜುಮುಕಿಯನ್ನು ತಂದು ನಿಮ್ಮ ಮುಂದೆ ಹಾಜರುಪಡಿಸಿದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಪೊಲೀಸರು ನಿಪಿ.21 ರಂತೆ ಸಂಜೆ 5.30 ಗಂಟೆಯಿಂದ 6.15 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

<u>ಪಾಟೀ ಸವಾಲು: **6** ನೇ ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ